ದಿಃ 28-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. **KDP** ವಕೀಲರಿಂದ:

ನಾನು ಡಿಪ್ಲೋಮಾ ಓದಿರುತ್ತೇನೆ. ದಾವಾ ಆಸ್ತಿಯನ್ನು 1975 ನೇ ಇಸವಿಯಲ್ಲಿ ನನ್ನ ತಂದೆ ಖರೀದಿಸಿರುತ್ತಾರೆ. ನಾನು ಆ ಖರೀದಿ ಪತ್ರವನ್ನು ನೋಡಿಲ್ಲ ಸದರಿ ಖರೀದಿ ಪತ್ರವು ಕಳೆದುಹೋದ ಕುರಿತು ಯಾವುದೇ ಪೋಲಿಸ ದೂರು ನೀಡಿಲ್ಲ. ನನ್ನ ತಂದೆ ಆಂಗ್ಲ ಭಾಷೆಯಲಿ ಸಹಿ ಮಾಡುತ್ತಿದ್ದರು. ನನ್ನ ತಂದೆ ಸಹಿಯನ್ನು ರುಜುವಾತು ಪಡಿಸಲು ಹೊಂದಾಣಿಕೆ ಆಗುವ ಯಾವುದೇ ಸಹಿವುಳ್ಳ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಡಿ-1 ರಲ್ಲಿ ನನ್ನ ತಂದೆ ಯದಾಗಲಿ ವಾದಿ ತಂದೆಯದಾಗಲಿ ಮತ್ತು ಖರೀದಿ ಪತ್ರದ ಸಾಕ್ಷಿದಾರರಾಗಲಿ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಪಹಣಿ ಪತ್ರಿಕೆಯಲ್ಲಿ ಸ್ವಂತ ಸಾಗುವಳಿದಾರರ ಹೆಸರು ಮತ್ತು ಬಟಾಯಿ ಸಾಗುವಳಿದಾರರ ಹೆಸರು ಬೇರೆ ಬೇರೆ ಕಾಲಂನಲ್ಲಿ ನಮೂದಿಸಲಾಗುತ್ತದೆ ಎಂದರೆ ಸರಿ. ನಿಡಿ-2 ರಲ್ಲಿ 1966-67 ನೇ ಸಾಲಿನ ವರದಿ ಪ್ರಕಾರ ಶಿವಶರಣಪ್ಪ ಬಿರಾದರ 8 ಎಕರೆ 19 ಗುಂಟೆ ಜಮೀನು ಖರೀದಿಸಿ ಕಬ್ಜೆಯಲ್ಲಿ ಇರುತ್ತಾನೆ ಎಂದು ತೋರಿಸಲಾಗಿದೆ ಎಂದರೆ ಸರಿ. 16 ಎಕರೆ 38 ಗುಂಟೆ ಜಮೀನಿನಲ್ಲಿ 8 ಎಕರೆ 19 ಗುಂಟೆ ಜಮೀನು ಶಿವಶರಣಪ್ಪ ಬಿರಾದರ ಖರೀದಿಸಿದ ನಂತರ ಉಳಿದ ಜಮೀನನ್ನು ನನ್ನ ತಂದೆ ಮಲ್ಕಾಜಪ್ಪ ತಂ. ಶರಣಪ್ಪ ರವರು ಬಟಾಯಿ ಕಬ್ಜಾದಾರರಾಗಿರುತ್ತಾರೆಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ-1 ರಿಂದ 6 ದಾಖಲಾತಿಗಳು ಸುಳ್ಳು ಸೃಷ್ಠಿ ಮಾಡಿ ನ್ಯಾಯಾಲಯಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-7 ರಲ್ಲಿ ಕ್ರ.ಸಂ. 11 ಎಂದು ಮತ್ತು ಹಕ್ಕುಬದಲಾವಣೆ ದಿನಾಂಕವನ್ನು 18-05-1977 ರಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ-9 ರಲ್ಲಿ ಹಕ್ಕುಬದಲಾವಣೆ ಸಂಃ 69 ದಿಃ 19-11-1997 ಎಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ-7 ಮತ್ತು 9 ರಲ್ಲಿ ತೋರಿಸಿದ ಹಕ್ಕುಬದಲಾವಣೆ ಕ್ರ. ಸಂ ಮತ್ತು ದಿನಾಂಕ ಬೇರೆ ಬೇರೆ ಇದ್ದು ಈ ದಾಖಲಾತಿಗಳನ್ನು ಕೊಟ್ಟಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-10 ರಲ್ಲಿ ಖರೀದಿ ಪತ್ರದ ಉಲ್ಲೇಖ ಇಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಮೂನೆ-10 ಇನ್ನೂ ಆಗಿಲ್ಲ ಎಂದರೆ ಸರಿ. ಸಾಕಿ

ಮುಂದುವರೆದು ವಾದಿಯರದು ಆಗಿರುತ್ತದೆ ನಮ್ಮದು ಆಗಿರುವುದಿಲ್ಲ. ದಾವಾ ಆಸ್ತಿ ಪೂರ್ವಕ್ಕೆ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಉತ್ತರಕ್ಕೆ ನಿಖರವಾಗಿ ಇರುತ್ತಾರೆಂದು ಗೊತ್ತಿಲ್ಲ, ಆದರೆ ನಮ್ಮ ಹೊಲದ ಸುತ್ತಮುತ್ತ ಬಸವರಾಜ ವಗ್ದರಗಿ, ರಾಜಕುಮಾರ ಗೌರ, ಶಿವು ಮಾಸ್ತರ ಇರುತ್ತಾರೆ. ಇವರುಗಳ ಜಮೀನು ಸ.ನಂ. ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಂದರಗಿ ಗ್ರಾಮದ ಪಶ್ಚಿಮ ದಿಕ್ಕಿಗೆ ಇದೆ.

ದಾವಾ ಆಸ್ತಿಯಲ್ಲಿ ಹೋದ ವರ್ಷ ಕಡ್ಲೆ ತೊಗರಿ ಬೆಳೆದಿರುತ್ತೇವೆ. ಪಹಣಿ ಪತ್ರಿಕೆ ಹೊರತುಪಡಿಸಿ ನಾವೆ ಕಬ್ಜೆಯಲ್ಲಿ ಇರುತ್ತೇವೆಂದು ಬೇರೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ದಾವಾ ಆಸ್ತಿ ಸುತ್ತಮುತ್ತ ಮಿಯಾಸಾಬ, ಶಂಕರ, ನಿಂಗಣ್ಣ, ಇಂತಿಯಾಜ ತುಕಾರಾಮ ರವರ ಜಮೀನು ಇರುತ್ತವೆ ಎಂದರೆ ಸರಿ.

ದಾವಾ ಆಸ್ತಿ ಕುರಿತು ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಯ ಜಮೀನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ